## ಒಬ್ಬನೇ ಕಟ್ಟಬೇಕು

ಬ್ಯಾಂಕ್ ಮ್ಯಾನೇಜರ್ ಗುಂಡನ ಹತ್ತಿರ, 'ಏನ್ರೀ, ಮನೆ ಕಟ್ಟೋವಾಗ ಇದ್ದ ವೇಗ, ಉತ್ಸಾಹ ಯಾವುದೂ ಸಾಲ ಕಟ್ಟೋವಾಗ ಇಲ್ಲವಲ್ಲ?' ಎಂದು ಕೇಳಿದ. ಅದಕ್ಕೆ ಗುಂಡ, 'ಸಾರ್, ಮನೇನ ಮೇಸ್ತ್ರಿ, ಗಾರೆ ಕೆಲಸದವರು, ಎಲೆಕ್ಟ್ರೀಶಿಯನ್, ಪ್ಲಂಬರ್, ಪೇಂಟರ್ ಎಲ್ಲಾ ಸೇರಿ ಕಟ್ಟದ್ವಿ. ಆದರೆ, ಸಾಲವನ್ನು ಮಾತ್ರ ನಾನೊಬ್ಬನೇ ಕಟ್ಟಬೇಕಲ್ವೆ? ಅದಕ್ಕೆ ಸಾರ್ ನಿಧಾನ!' ಎಂದ. ಮ್ಯಾನೇಜರ್ ತಬ್ಬಿಬ್ಬು.

**ಅರ್ಚನಾ ವಿ. ರಾವ್**





## ನಗುಮುಖ

ಬಹಳ ದಿನಗಳ ಬಳಿಕ ಪರಿಚಿತ ವೈದ್ಯರನ್ನು ಭೇಟಿ ಮಾಡಿದ ಕಿಟ್ಟು ಅವರನ್ನು ಕೇಳಿದ:

'ನಿಮ್ಮಲ್ಲಿದ್ದ ನರ್ಸನ್ನು ಕೆಲಸದಿಂದ ಯಾಕೆ ತೆಗೆದಿರಿ?'

ವೈದ್ಯರು ಹೇಳಿದರು, 'ಅನೇಕ ರೋಗಿಗಳು ಹೇಳುತ್ತಿದ್ದರು, ಆ ನರ್ಸ್‌ಳ ಒಂದು ನಗೆಯಿಂದಲೇ ರೋಗಗಳು ಗುಣವಾಗುತ್ತವೆ ಎಂದು!'

**ಶೋಭಾ ಪ್ರಮೋದ್**

ಕಲೆ: ಗಣೇಶ ಆಚಾರ್ಯ